ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 21- 23
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

# ವೃದ್ದ ಮಹಿಳೆಯರ ಸಮಸ್ಯೆಗಳು: ಒಂದು ಅಧ್ಯಯನ

**ಎಂ.ಶೃತಿ***

*ಸಂಶೋಧಕರು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ಹುಟ್ಟಿನಿಂದ ಸಾಯುವವರೆಗೆ ಮಾನವನಲ್ಲಿ ಹಲವಾರು ಬದಲಾವಣೆಗಳನ್ನು ಕಾಣುತ್ತೇವೆ. ಮಾನವನ ವಿವಿಧ ಹಂತದ ಬೆಳವಣಿಗೆಯಲ್ಲಿ ಬಾಲ್ಯ, ಪ್ರೌಢಾವಸ್ಥೆ, ಯೌವನಾವಸ್ಥೆಯಷ್ಟೆ ವೃದ್ಧಾಪ್ಯವು ಪ್ರಮುಖವಾದ ಹಂತವಾಗಿದೆ. ಮನುಷ್ಯನಾಗಿ ಹುಟ್ಟಿದ ಮೇಲೆ ಜೀವನದ ಪ್ರತಿ ಹಂತದಲ್ಲೂ ವಿವಿಧ ರೀತಿಯ ಸಮಸ್ಯೆಗಳು ಎದುರಾಗುವುದು ಸಹಜ. ಅದರಂತೆ ವೃದ್ಧಾಪ್ಯದಲ್ಲಿಯೂ ನಾನಾ ತೆರನಾದ ಸಮಸ್ಯೆಗಳುಂಟಾಗಿ ಅನುಭವಿಸಲಾಗದ ಯಾತನೆಯುಂಟಾಗುತ್ತದೆ. ಏಕೆಂದರೆ ವೃದ್ಧಾಪ್ಯದಲ್ಲಿ ವಯೋಸಹಜ ದೈಹಿಕ ಸಮಸ್ಯೆಗಳ ಜೊತೆಗೆ ಮಾನಸಿಕ, ಸಾಮಾಜಿಕ, ಕೌಟುಂಬಿಕ ಸಮಸ್ಯೆಗಳು ಕೂಡ ತಲೆದೋರುತ್ತದೆ. ಈ ಹಿನ್ನಲೆಯಲ್ಲಿ ವೃದ್ಧ ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಪ್ರಸ್ತುತ ಲೇಖನದಲ್ಲಿ ವಿಮರ್ಶಿಸಲಾಗಿದೆ.*

**Keywords:** *ವೃದ್ಧರು, ಮಹಿಳೆಯರು, ಸಮಾಜ, ಕುಟುಂಬ, ವೃದ್ಧಾಪ್ಯ.*

**ಪೀಠಿಕೆ**

ಭಾರತೀಯ ಸಮಾಜದಲ್ಲಷ್ಟೆಯಲ್ಲದೆ ವಿಶ್ವದ ಎಲ್ಲಾ ಸಮಾಜಗಳಲ್ಲೂ ವೃದ್ಧರು ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವೃದ್ಧರು ಎದುರಿಸುವ ದೈಹಿಕ ಸಮಸ್ಯೆಗಳು ಒಂದೆಡೆಯಾದರೆ ಕುಟುಂಬದ ಇತರ ಸದಸ್ಯರ ಪ್ರೀತಿಯ ನಿರಾಕರಣೆ ಮತ್ತು ನಿರ್ಲಕ್ಷ್ಯ ಮನೋಭಾವ ಮಾನಸಿಕ ಸಮಸ್ಯೆಯನ್ನುಂಟು ಮಾಡುತ್ತದೆ. ವೃದ್ಧರ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವ ಆರೋಗ್ಯ ಸಂಸ್ಥೆಯು ಮೊದಲ ಬಾರಿಗೆ 1948ರಲ್ಲಿ ವೃದ್ಧರ ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ನಡೆಸಿತು. 1982ರಲ್ಲಿ ವಿಯೆಟ್ನಾಂ ನಗರದಲ್ಲಿ ವಿಶ್ವ ಆರೋಗ್ಯ ಸಮಸ್ಯೆಗಳ ಬಗ್ಗೆ ಚರ್ಚಿಸಲು ಮೊದಲನೆ ಸಮ್ಮೇಳನ ನಡೆಯಿತು 1990ರಲ್ಲಿ ವಿಶ್ವಸಂಸ್ಥೆ ಘೋಷಣೆಯನ್ನು ಹೊರಡಿಸಿ ಪ್ರತಿವರ್ಷ ಅಕ್ಟೋಬರ್ ಒಂದರಂದು ಅಂತರರಾಷ್ಟ್ರೀಯ ವೃದ್ಧರ ದಿನವನ್ನಾಗಿ ಅಂಗೀಕರಿಸಲು ಕರೆನೀಡಿತು. 1991ರಲ್ಲಿ 18 ಸೂತ್ರಗಳನ್ನೊಳಗೊಂಡ ಒಂದು ಠರಾವನ್ನು ಅಂಗೀಕರಿಸಿತು. ವೃದ್ಧರು ಘನತೆಯಿಂದ, ಗೌರವದಿಂದ, ಸ್ವತಂತ್ರವಾಗಿ, ತೃಪ್ತಿಕರವಾಗಿ ಹಾಗೂ ಉಪಯುಕ್ತ ಬದುಕನ್ನು ಸಾಗಿಸುವ ಕುರಿತು ಈ ಸೂತ್ರಗಳನ್ನು ತಿಳಿಸಲಾಯಿತು.

ಪುರುಷ ವೃದ್ಧರಿಗಿಂತ ಮಹಿಳಾ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನ್ಯಾಷನಲ್ ಸ್ಯಾಂಪಲ್ ಸರ್ವೆ ವರದಿ ಪ್ರಕಾರ ಶೇ.55ರಷ್ಟು ಮಹಿಳಾ ವೃದ್ದರಿದ್ದು, ಇವರಲ್ಲಿ ಶೇ.73ರಷ್ಟು ಅನಕ್ಷರಸ್ಥರಾಗಿದ್ದಾರೆ ಮತ್ತು ಶೇ.80ರಷ್ಟು ವೃದ್ಧಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಅಲ್ಲದೇ

***Please cite this article as*:** ಶೃತಿ. ಎಂ. (2022). ವೃದ್ದ ಮಹಿಳೆಯರ ಸಮಸ್ಯೆಗಳು: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(3), 21–23.

ಶೇ.90ರಷ್ಟು ಮಹಿಳಾ ವೃದ್ಧರಿಗೆ ಯಾವುದೇ ತೆರನಾದ ಸಾಮಾಜಿಕ ಭದ್ರತೆ ಇಲ್ಲದಿರುವುದು ಕಂಡು ಬಂದಿದೆ.

ಆರ್ಥಿಕವಾಗಿ ದುರ್ಬಲರಾದ ವೃದ್ಧ ಮಹಿಳೆಯರು ಜೀವನೋಪಾಯಕ್ಕಾಗಿ ಮಕ್ಕಳನ್ನು ಆಶ್ರಯಿಸುವುದು ಅನಿವಾರ್ಯವಾಗಿರುತ್ತದೆ. ಆದರೆ ಮಕ್ಕಳು ಸರಿಯಾಗಿ ವೃದ್ಧ ತಾಯಿಯನ್ನು/ಮಹಿಳೆಯರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ದುಡಿದು ತಿನ್ನುವುದು ಅನಿವಾರ್ಯವಾಗುತ್ತದೆ. ಆದರೆ ದೈಹಿಕವಾಗಿ ದುಡಿಯಲು ಸಾಧ್ಯವಾಗದೇ ಇರುವುದ್ದರಿಂದ ಭಿಕ್ಷಾಟನೆ ಮಾಡುವುದು ಅನಿವಾರ್ಯವಾಗುತ್ತದೆ. ಮೂಲಭೂತ ಅಗತ್ಯಗಳಾದ ಅನ್ನ, ಬಟ್ಟೆ ಮತ್ತು ವಸತಿಗಳಿಲ್ಲದೆ ಜೀವನ ನಿರ್ವಹಣೆಯಲ್ಲಿ ತುಂಬಾ ಸಂಕಷ್ಟ ಪಡುತ್ತಿರುತ್ತಾರೆ.

ಹಿಂದೆ ಅವಿಭಕ್ತ ಕುಟುಂಬಗಳು ಸಾಮಾನ್ಯವಾಗಿ ಎಲ್ಲೆಡೆ ಕಂಡುಬರುತ್ತಿದ್ದವು. ಅವಿಭಕ್ತ ಕುಟುಂಬದಲ್ಲಿ ವೃದ್ಧಾಪ್ಯವೆಂಬುದು ಸಮಸ್ಯೆಯಾಗಿರಲಿಲ್ಲ ಬದಲಿಗೆ ಕಿರಿಯ ಪೀಳಿಗೆಯ ಮಕ್ಕಳಿಗೆ ಬುದ್ಧಿವಾದ ಹೇಳುವ ಗುರುವಿನ ಸ್ಥಾನದಲ್ಲಿರುತ್ತಿದ್ದರು. ಕುಟುಂಬದಲ್ಲಿ ವೃದ್ಧರಿಗೆ ಅವರಿಗೆ ಗೌರವ–ಮನ್ನಣೆಯನ್ನು ನೀಡುತ್ತಿದ್ದರು. ಕಿರಿಯರು ಅವರಿಗೆ ವಿಧೇಯಕರಾಗಿ ನಡೆದುಕೊಳ್ಳುತ್ತಿದ್ದರು. ಆದರೆ ಬದಲಾದ ಸಾಮಾಜಿಕ ಪರಿಸ್ಥಿತಿಗಳು ವೃದ್ಧರನ್ನು ಹಲವಾರು ಸಮಸ್ಯೆಗಳ ಸುಳಿಗೆ ಸಿಕ್ಕು ಚಿಂತೆಗೀಡಾಗುವಂತೆ ಮಾಡಿವೆ.

ವೃದ್ಧರನ್ನು ಸಾಮಾನ್ಯವಾಗಿ ಕಾಡುವ ಅತಿ ಸಮಸ್ಯೆಯೆಂದರೆ ಒಂಟಿತನ ಸಮಸ್ಯೆ. ಹೆಂಡತಿ ಗಂಡನನ್ನು ಕಳೆದುಕೊಂಡಾಗ ಜೀವನ ಕಷ್ಟದಾಯಕವಾಗಿರುತ್ತದೆ. ಮನೆಗೆ ಬಂದಂತಹ ಸೊಸೆಯಂದಿರು ವೃದ್ಧರನ್ನು ನೋಡಿಕೊಳ್ಳುವ ಸ್ಥಿತಿ ತಕ್ಕಮಟ್ಟಿಗೆ ಇರುತ್ತದೆ. ಮನೆಯ ಪರಿಸ್ಥಿತಿಯು ಮೊದಲಿನ ತರ ಇರುವುದಿಲ್ಲ. ಮನೆಯಲ್ಲಿ ಯಾರೂ ಸರಿಯಾಗಿ ಮಾತನಾಡಿಸುವುದಿಲ್ಲ ಅವರ ಬೇಕು ಬೇಡಿಕೆಗಳನ್ನು ಕೇಳುವವರಿರುವುದಿಲ್ಲ. ಮಾನಸಿಕವಾಗಿ ಒಂಟಿತನದ ಸಮಸ್ಯೆಯನ್ನು ಎದುರಿಸುತ್ತಾರೆ.

ಮುಪ್ಪಿನಲ್ಲಿ ಚರ್ಮ ತನ್ನ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಸುಕ್ಕುಗಟ್ಟಿದ ಚರ್ಮ ದೃಷ್ಟಿ ದೋಷಗಳು, ಜ್ಞಾಪಕ ಶಕ್ತಿ ಕಡಿಮೆಯಾಗುವುದು, ಶ್ರಮಶಕ್ತಿ ಕಡಿಮೆಯಾಗುತ್ತಾ, ಆಹಾರದ ಪಚನ ಮತ್ತು ಹೀರಿಕೆ ಕಡಿಮೆಯಾಗುತ್ತದೆ. ಹೃದಯ ಸಂಕುಚನ ಸಾಮರ್ಥ್ಯ ಕುಗ್ಗಿ ದೇಹದಲ್ಲಿ ರಕ್ತ ಸಂಚಲನೆ ಕುಗ್ಗುತ್ತದೆ. ಶರೀರ ಕ್ರಿಯೆಗಳಲ್ಲಿ ಬದಲಾವಣೆಗಳಾಗುತ್ತವೆ ವಯಸ್ಸಿನಿಂದ ಮಾಗಿದ ವ್ಯಕ್ತಿಯಲ್ಲಿ ಕೀಲುಗಳ ಚಲನೆಯು ಸರಾಗವಾಗಿ ಜರುಗುವುದಿಲ್ಲ ಮತ್ತು ಮೂತ್ರ ವಿಸರ್ಜನೆಯಲ್ಲಿ ತೊಂದರೆ ಉಂಟಾಗುತ್ತದೆ. ಪಚನಾಂಗ ತೊಂದರೆಗಳು ಹಸಿವು ಮತ್ತು ಮಲ ಪದ್ಧತಿಯ ಸಮಸ್ಯೆ ಉಂಟಾಗುತ್ತದೆ.

ಮಕ್ಕಳನ್ನು ಹೆತ್ತು ಹೊತ್ತು ರಕ್ಷಿಸಿ ಲಾಲನೆ ಪಾಲನೆ ಮಾಡಿ ವಿದ್ಯೆ–ಬುದ್ಧಿ ನೀಡಿ ಕಷ್ಟಪಟ್ಟು ಸಾಕಿರುತ್ತಾರೆ. ಮಗ ಸೊಸೆ ಮೊಮ್ಮಕ್ಕಳೊಂದಿಗೆ ಸಂತೋಷವಾಗಿರಬೇಕೆಂಬ ಬಯಕೆ ಇರುತ್ತದೆ. ಆದರೆ ಅವರ ಆಸ ಈಡೇರದೆ ಹೋದಾಗ ಅವರ ಮನಸ್ಸು ಮಾನಸಿಕ ಖಿನ್ನತೆಗೆ ಒಳಗಾಗುತ್ತಾರೆ. ಖಿನ್ನತೆಯ ಜೊತೆಗೆ ಒತ್ತಡ, ಮರೆವಿನ ಕಾಯಿಲೆ ಮುಂತಾದ ಸಮಸ್ಯೆಗಳು ಎದುರಾಗುತ್ತವೆ. ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದಾಗ ನಗರ ಪ್ರದೇಶದಲ್ಲಿರುವ ವೃದ್ಧರು ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ.

ಮಕ್ಕಳ ಭವಿಷ್ಯ ಚೆನ್ನಾಗಿರಲಿ ಎಂಬ ಉದ್ದೇಶದಿಂದ ಎಲ್ಲರ ತಂದೆ–ತಾಯಿ ತಮಗಿರಲಿ ಇಲ್ಲದಿರಲಿ ತಮ್ಮಂತೆ ತಮ್ಮ ಮಕ್ಕಳು ಕಷ್ಟ ಅನುಭವಿಸಬಾರದು ಎಂಬ ಉದ್ದೇಶದಿಂದ ಸಾಲ ಮಾಡಿಯಾದರೂ

ಉತ್ತಮವಾದ ಭವಿಷ್ಯ ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಆದರೆ ರೆಕ್ಕೆ ಬಲಿತ ಹಕ್ಕಿ ಹಾರುವವಂತೆ ಭವಿಷ್ಯ ರೂಪಿಸಿಕೊಂಡ ಮಕ್ಕಳು ತಮ್ಮ ತಂದೆ–ತಾಯಿಯರ ಕಾಳಜಿ ಮಾಡದೆ ತಮ್ಮ ಜೀವನವನ್ನು ರೂಪಿಸಿಕೊಳ್ಳುವತ್ತ ಗಮನಹರಿಸುತ್ತಾರೆ. ದಿನಕಳೆದಂತೆ ತಂದೆ–ತಾಯಿ ಮಕ್ಕಳಿಗೆ ಭಾರವಾಗುತ್ತಾರೆ. ಹಣವಿದ್ದರೂ ನೆಮ್ಮದಿಯಿಂದಿರದ ಶ್ರೀಮಂತ ಮನೆತನಗಳಲ್ಲಿನ ಮಕ್ಕಳು ವಿದೇಶಗಳಿಗೆ ಹೋಗಿ ನೆಲೆಸಿ ಅಲ್ಲಿಯೇ ಜೀವನ ರೂಪಿಸಿಕೊಳ್ಳುತ್ತಾರೆ. ಭಾರತದಲ್ಲಿ ವೃದ್ಧ ತಂದೆ–ತಾಯಿಯನ್ನು ಕರೆಸಿಕೊಂಡು ಅವರ ಹಾರೈಕೆ ಮಾಡಲು ಅವರಿಗೆ ಸಾಧ್ಯವಾಗುವುದಿಲ್ಲ ಮತ್ತು ಅಪ್ಪ ಅಮ್ಮ ಇರುವ ಕಡೆ ಬಂದು ಅವರ ಯೋಗಕ್ಷೇಮವನ್ನು ವಿಚಾರಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ಮಕ್ಕಳಿಗಾಗಿ ಕಣ್ಣೀರು ಹಾಕುತ್ತಾ ಜೀವನವನ್ನು ಸಾಗಿಸುತ್ತಾರೆ.

ವೃದ್ಧರಿಗೆ ದೈಹಿಕ ಸಮಸ್ಯೆಗಿಂತ ಮಾನಸಿಕ ಸಮಸ್ಯೆಯೇ ಹೆಚ್ಚಾಗಿರುತ್ತದೆ ಇದರಿಂದಾಗಿ ವೃದ್ಧರು ಬಹುಬೇಗನೆ ಕಾಯಿಲೆಗೆ ತುತ್ತಾಗುತ್ತಾರೆ. ಇಂದಿಗೂ ಗ್ರಾಮಗಳಲ್ಲಿ ಹಿರಿಯರಿಗೆ ಗೌರವ ನೀಡುವ ಮಾರ್ಗದರ್ಶನವನ್ನು ಪಡೆಯುವ ಪರಂಪರೆ ಇದೆ. ಆದರೆ ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದಲ್ಲಿ ವೃದ್ಧ ತಂದೆ–ತಾಯಿಯ ರಕ್ಷಣೆ ಮಾಡುತ್ತಿದ್ದಾರೆ. ಪತಿ–ಪತ್ನಿಯ ಜೊತೆಗಿದ್ದಾಗ ಅವರಿಗೆ ಎಷ್ಟೇ ವಯಸ್ಸಾದರೂ ಎಷ್ಟೇ ಕಷ್ಟ ಬಂದರೂ ಸರಿದೂಗಿಸಿಕೊಂಡು ಹೋಗುತ್ತಾರೆ. ಮುಪ್ಪಿನಲ್ಲಿ ಒಬ್ಬರಿಗೊಬ್ಬರು ನೋವುಗಳನ್ನು ಹಂಚಿಕೊಳ್ಳುತ್ತಾರೆ ತೃಪ್ತಿಯ ಜೀವನವನ್ನು ಸಾಗಿಸುತ್ತಾರೆ. ಆದರೆ ಬಾಳಸಂಗಾತಿಯನ್ನು ಕಳೆದುಕೊಂಡಾಗ ಮುಪ್ಪಿನಲ್ಲಿ ಯಾರೊಂದಿಗೆ ಜೀವನ ಮಾಡಬೇಕು ಎಂಬ ಪ್ರಶ್ನೆ ಮೂಡುತ್ತದೆ. ಸ್ವಲ್ಪ ಮಟ್ಟಿಗೆ ಆಸ್ತಿಯನ್ನು ಹೊಂದಿದವರಾಗಿ ಗೌರವ ಮನ್ನಣೆ ಪಡೆಯುತ್ತಾರೆ. ಆದರೆ ವೃದ್ಧ ವಿಧವೆಯರ ಬಾಳು ತುಂಬಾ ಕಷ್ಟದಾಯಕವಾಗಿರುತ್ತೆದೆ. ಮನೆಯಲ್ಲಿ ಯಜಮಾನಿಕೆಯನ್ನು ಕಳೆದುಕೊಳ್ಳುತ್ತಾಳೆ. ಇಷ್ಟವಿರಲಿ ಇಲ್ಲದಿರಲಿ ಇನ್ನೊಬ್ಬರ ಆಸರೆಯಲ್ಲಿ ಜೀವನ ನಡೆಸಬೇಕಾಗುತ್ತದೆ.

ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಆಯಸ್ಸನ್ನು ಹೊಂದಿರುತ್ತಾಳೆ. ಒಟ್ಟಾರೆಯಾಗಿ ಹೇಳುವುದಾದರೆ ಆರ್ಥಿಕ ಸಮಸ್ಯೆ ಒಂದು ರೀತಿಯಾದರೆ. ಉತ್ತಮ ಸ್ಥಿತಿಯಲ್ಲಿರುವವರು ಸಮಸ್ಯೆ ಮತ್ತೊಂದು ರೀತಿಯಲ್ಲಿರುತ್ತದೆ. ಕುಟುಂಬದಲ್ಲಿ ಹೊಂದಾಣಿಕೆ ಸಮಸ್ಯೆಯಿಂದ ಅತೃಪ್ತಿ ಜೀವನ ನಡೆಸುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾದವರು ಕುಟುಂಬದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದರ ಜೊತೆಯಲ್ಲಿ ವೃದ್ಯಾಪ್ಯದ ಜೀವನಕ್ಕೆ ಸಾಕಷ್ಟು ಸಿದ್ಧತೆಗಳನ್ನು ಮುಂಚಿತವಾಗಿಯೇ ಮಾಡಿಕೊಳ್ಳಬೇಕಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಬೈರಪ್ಪ ಕೆ. (2006). ಭಾರತದಲ್ಲಿನ ಸಾಮಾಜಿಕ ಸಮಸ್ಯೆಗಳು. ಸಿದ್ದಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ.
- ನಾಗಮೋಹನ್ ದಾಸ್ ಎಚ್.ಎನ್. (2014). ಮಹಿಳಾ ಅಸಮಾನತೆ, ಚಿಂತನ ಪುಸ್ತಕ.
- ರಾಮಚಂದ್ರ ಜೋಷಿ. (2009). ಭಾರತದ ಸಾಮಾಜಿಕ ಸಮಸ್ಯೆಗಳು. ಸಿದ್ದಲಿಂಗೇಶ್ವರ ಪ್ರಕಾಶನ.